ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ: ಸಿ3(4)ಪ್ರಾ.ಶಿ. ಉ.ವ್ಯಾ.ಅನು44-2009-10 15-12-2010

ಸುತ್ತೋಲೆ

******

ವಿಷಯ: ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳು ರೆಗ್ಯುಲರ್ ಬಿಇಡಿ ತರಬೇತಿ ಪಡೆಯಲು ಅನುಮತಿಸುವ ಕಾರ್ಯವಿಧಾನ ಸರಳೀಕರಿಸುವ ಬಗ್ಗೆ.]

ಉಲ್ಲೇಖ: 1. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ3(4) ಪ್ರಾ.ಶಿ/ಉ.ವ್ಯಾ/51/2004-05 ದಿನಾಂಕ 05-07-2005.

2. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿ3(4) ಪ್ರಾ.ಶಿ.ಉ.ವ್ಯಾ.51/2004-05 ದಿ.. 15.10.2005.

3. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಿ3(2)ಪ್ರಾ.ಶಿ.ಉ.ವ್ಯಾ/ಅನು/07-2006-07 ದಿ.02-09-2006.

4. ಸರ್ಕಾರದ ಆದೇಶ ಸಂಖ್ಯೆ: ಇಡಿ 133 ಇ ಎಸ್ ಡಬ್ಲ್ಯೂ 2008, ಬೆಂಗಳೂರು ದಿ.05-11-2008.

5. ಈ ಕಛೇರಿ ಪತ್ರ ಸಂಖ್ಯೆ: ಸಿ3(4) ಪ್ರಾ.ಶಿ.ಉ.ವ್ಯಾ.ಅನು1/2010 ದಿನಾಂಕ 16-08-2010.

*************

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಬಿಇಡಿ ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಲು ಉಲ್ಲೇಖದ ಸರ್ಕಾರದ ಪತ್ರದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು/ ಅಪರ ಆಯುಕ್ತರುಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಕೆಲವು ಪ್ರಾಥಮಿಕ ಶಾಲಾ ಶಿಕ್ಷಕರು ಅನುಮತಿ ಕೋರಿ ಮನವಿ ಸಲ್ಲಿಸಿ, ಅನುಮತಿ ಪಡೆಯುವ ಮೊದಲೇ ಬಿಇಡಿ ತರಬೇತಿಗೆ ಹಾಜರಾಗಿರುವುದು ಈ ಆಯುಕ್ತಾಲಯದ ಗಮನಕ್ಕೆ ಬಂದಿದೆ. ಬಿಇಡಿ ತರಬೇತಿ ಅಥವಾ ಉನ್ನತ ವ್ಯಾಸಂಗಕ್ಕಾಗಿ ಆಯುಕ್ತಾಲಯದ ಆದೇಶವನ್ನು ಪಡೆದ ನಂತರವೇ ಸಂಬಂಧಿಸಿದ ಬಟವಾಡೆ ಅಧಿಕಾರಿಗಳು ಸಂಬಂಧಿಸಿದ ಶಿಕ್ಷಕರನ್ನು ಉನ್ನತ ವ್ಯಾಸಂಗ ಮುಂದುವರಿಸುವ ಸಲುವಾಗಿ ಸಂಬಂಧಿಸಿದ ಶಾಲೆಗಳಿಂದ ಬಿಡುಗಡೆಗೊಳಿಸಲು ತಿಳಿಸಲಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರುಗಳಿಂದ ರೆಗ್ಯುಲರ್ ಬಿಇಡಿ ವ್ಯಾಸಂಗಕ್ಕೆ ಅನುಮತಿ ಕೋರಿ ಬರುವ ಪ್ರಸ್ತಾವನೆಗಳನ್ನು ಕೆಳಕಂಡ ಷರತ್ತುಗಳ ಹಿನ್ನೆಲೆಯಲ್ಲಿ ಪರಿಶೀಲಿಸಿ ಅರ್ಹ ಪ್ರಕರಣಗಳನ್ನು ಮಾತ್ರ ಅಗತ್ಯ ಶಿಫಾರಸ್ಸಿನೊಂದಿಗೆ ಈ ಆಯುಕ್ತಾಲಯಕ್ಕೆ ಸಲ್ಲಿಸುವಂತೆ ಸೂಚಿಸಿದೆ.

1. ಕೆ.ಸಿ.ಎಸ್.ಆರ್. ನಿಯಮ ಪರಿಶಿಷ್ಟ-II (ಎ) ರಲ್ಲಿನ ಎಲ್ಲಾ ಷರತ್ತುಗಳನ್ನು ಪೂರೈಸಿರಬೇಕು.
2. ಉನ್ನತ ವ್ಯಾಸಂಗಕ್ಕೆ ಅನುಮತಿ ಬಯಸುವ ಶಿಕ್ಷಕರು 48 ವರ್ಷಕ್ಕಿಂತ ಕಡಿಮೆ ವಯೋಮಾನ ಉಳ್ಳವರಾಗಿರಬೇಕು.
3. ಈ ಸುತ್ತೋಲೆಗೆ ಲಗತ್ತಿಸಿರುವ ಚೆಕ್‌ಲಿಸ್ಟನಲ್ಲಿ ನಿಖರ ಮಾಹಿತಿ ಭರ್ತಿ ಮಾಡಿ ಅಗತ್ಯ ದಾಖಲೆಗಳನ್ನು ಲಗತ್ತಿಸಿಬೇಕು.
4. ಕನಿಷ್ಠ 5 ವರ್ಷಗಳ ನಿರಂತರ ಸೇವೆಯನ್ನು ಸಲ್ಲಿಸಿರಬೇಕು.
5. ಖಾಯಂ ಪೂರ್ವ ಸೇವಾ ಅವಧಿ ತೃಪ್ತಿಕರವೆಂದು ಘೋಷಿಸಿರುವ ದಾಖಲೆಗಳನ್ನು ಲಗತ್ತಿಸಿರಬೇಕು.
6. ಉನ್ನತ ವ್ಯಾಸಂಗ ಅಥವಾ ಬಿಇಡಿ ತರಬೇತಿಯನ್ನು ಸ್ವಂತ ಖರ್ಚಿನಲ್ಲಿ ಭರಿಸತಕ್ಕದು.
7. ಉನ್ನತ ವಿದ್ಯಾಭ್ಯಾಸಕ್ಕಾಗಿ ನಿಯೋಜಿಸಬೇಕಾದ ಸರ್ಕಾರಿ ನೌಕರರ ಸಂಖ್ಯೆ: ಸಂಬಂಧಿತ ಉದ್ಯೋಗಿಯ ಕೇಡರಿನ, ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆಯ ಶೇಕಡಾ 5 ನ್ನು

ಮೀರದಂತೆ ಪ್ರಸ್ತಾವನೆ ಸಲ್ಲಿಸುವುದು. ( 2001 ರ ನಂತರದ ನೇಮಕಾತಿ ತಾಲ್ಲೂಕು ವೃಂದದಲ್ಲಿ, 2001 ಕ್ಕೆ ಪೂರ್ವದಲ್ಲಿ ಜಿಲ್ಲಾವೃಂದದಲ್ಲಿ)

8. ಈ ಕಾರ್ಯಾಲಯದ ಪತ್ರ ಸಂಖ್ಯೆ ಸಿ3(4)ಪ್ರಾಶಿ ಉ.ವ್ಯಾ ಅನು1 /2010-11 ದಿನಾಂಕ 16-08-2010ರ ಪ್ರಕಾರ ಸರ್ಕಾರಿ ಸೇವೆಗೆ ಸೇರಿದ ನಂತರ ಬಿಎ, ಬಿಎಸ್ಸಿ ಉನ್ನತ ವ್ಯಾಸಂಗ ಮುಂದುವರಿಸಲು ನೀಡಿರುವ ನಿರ್ದೇಶನದ ರೀತಿಯಲ್ಲಿ ಬಿಇಡಿ ವ್ಯಾಸಂಗಕ್ಕೂ ಜೇಷ್ಠತಾ ಪಟ್ಟಿ ಸಿದ್ದಪಡಿಸಿಕೊಂಡು ಸಂಬಂಧಿಸಿದ ಶಿಕ್ಷಕರಿಂದ ಪ್ರಸ್ತಾವನೆಗಳನ್ನು ಸಿದ್ದಪಡಿಸಿ ಉನ್ನತ ವ್ಯಾಸಂಗಕ್ಕಾಗಿ ಶಾಲಾ ಕಾರ್ಯಕ್ಕೆ ಅಡಚಣೆ ಆಗದಿರುವಂತೆ ಬದಲಿ ವ್ಯವಸ್ಥೆ ಮಾಡುವ ಶಿಫಾರಸ್ಸಿನೊಂದಿಗೆ ಆಸಕ್ತ ಶಿಕ್ಷಕರ ಪ್ರಸ್ತಾವನೆಗಳನ್ನು ಸಕಾಲಕ್ಕೆ ಸಲ್ಲಿಸುವುದು.

9. ರೂ.50/- ರ ಛಾಪಾಕಾಗದದಲ್ಲಿ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಫ್ ಡಿ 9 ಎಸ್ ಆರ್ ಎಸ್ 1993 ದಿನಾಂಕ 18-11-1993 ರ ವಿಧಿಸಿರುವ ಷರತ್ತಿನ್ವಯ " ನಾನು ಉನ್ನತ ವ್ಯಾಸಂಗದ ಅವಧಿಯನ್ನು ಲೆಕ್ಕಕ್ಕಿಲ್ಲದ ದಿನಗಳು ಅಥವಾ ಕರ್ತವ್ಯ ರಹಿತ ದಿನಗಳು ( Dies-non or Not on Duty) ಎಂದು ಪರಿಗಣಿಸಲು ಈ ಮೂಲಕ ಸ್ವ ಇಚ್ಛೆಯಿಂದ ಒಪ್ಪಿಕೊಂಡಿರುತ್ತೇನೆ. ಈ ಉನ್ನತ ವ್ಯಾಸಂಗದ ಅವಧಿಯನ್ನು ವಾರ್ಷಿಕ ವೇತನ ಬಡ್ತಿ, ನಿವೃತ್ತಿ ವೇತನ ಸೌಲಭ್ಯ, ರಜೆ ಸೌಲಭ್ಯ, ಮತ್ತು ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹತದಾಯಕವೆಂದು ಪರಿಗಣಿಸದಿರುವಂತೆ ಈ ಮೂಲಕ ಸ್ವ ಇಚ್ಛೆಯಿಂದ ಒಪ್ಪಿಕೊಳ್ಳುತ್ತೇನೆ" ಎಂದು ಲಿಖಿತ ಮುಚ್ಚಳಿಕೆಯನ್ನು ಪಡೆದಿರಬೇಕು.

10. ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಶಿಕ್ಷಕರ ಸೇವಾ ವಿವರವನ್ನು ದೃಡೀಕರಿಸಿ ಸಲ್ಲಿಸುವುದು ಮತ್ತು ಈ ಕಛೇರಿಯಿಂದ ಹೊರಡಿಸಿರುವ ಚೆಕ್‌ಲಿಸ್ಟ ಪ್ರಕಾರ ಮ್ಹಾಹಿತಿ ಹಾಗೂ ದಾಖಲೆಗಳನ್ನು ಸಲ್ಲಿಸುವುದು.

11. ಶಿಕ್ಷಕರಿಗೆ ಯಾವ ಶೈಕ್ಷಣಿಕ ವರ್ಷದಲ್ಲಿ ಉನ್ನತ ವ್ಯಾಸಂಗಕ್ಕೆ ಅನುಮತಿ ಕೋರಲಾಗಿದೆ ಎಂಬ ಬಗ್ಗೆ ಸ್ಪಷ್ಟವಾಗಿ ನಮೂದಿಸುವುದು.

12. ಉನ್ನತ ವ್ಯಾಸಂಗಕ್ಕೆ ಸಂಬಂಧಿಸಿದ ಎಲ್ಲಾ ಷರತ್ತುಗಳನ್ನು ಪೂರೈಸಿರುವ ಬಗ್ಗೆ ಖಾತರಿಮಾಡಿಕೊಂಡು ಉಪನಿರ್ದೇಶಕರು ಜಿಲ್ಲೆಯ ಅರ್ಹ ಶಿಕ್ಷಕರ ಕೋಡೀಕೃತ ಪ್ರಸ್ತಾವನೆಯನ್ನು **ಈ ಕೆಳಗೆ ತಿಳಿಸಿರುವ ದಿನಾಂಕದ ಒಳಗೆ** ಸಂಬಂಧಿಸಿದ ಆಯುಕ್ತಾಲಯಕ್ಕೆ ವರ್ಷಕ್ಕೆ ಒಂದು ಸಾರಿ ಮಾತ್ರ ಸಲ್ಲಿಸುವುದು.
    ಬಿಇಡಿ ವ್ಯಾಸಂಗಕ್ಕಾಗಿ ---- ನವೆಂಬರ್ 05
    ಬಿಪಿಇಡಿ ವ್ಯಾಸಂಗಕ್ಕಾಗಿ --- ಜುಲೈ 15

13. ಉಪನಿರ್ದೇಶಕರು, ಆಯುಕ್ತರಿಂದ ಅನುಮತಿ ದೊರೆತ ಪ್ರಕರಣಗಳಲ್ಲಿ ಅನುಮತಿ ನೀಡುವ ಆದೇಶಗಳನ್ನು ಹೊರಡಿಸುವಾಗ ಮೇಲಿನ ಷರತ್ತುಗಳನ್ನು ವಿಧಿಸಿ ಶಿಕ್ಷಕರಿಗೆ ಅನುಮತಿ ಆದೇಶವನ್ನು ಹೊರಡಿಸುವುದು.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು,
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು,

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಅಪರ ಆಯುಕ್ತರು, ಧಾರವಾಡ ಮತ್ತು ಗುಲಬರ್ಗಾ
2. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು

\\10.161.13.21\d\EST3\latha\2010-11 BED.doc

## ಚೆಕ್ ಲಿಸ್ಟ್

ಉನ್ನತ ವ್ಯಾಸಂಗಕ್ಕೆ ಅನುಮತಿ ಕೋರಿ ಸಲ್ಲಿಸುವ ಪ್ರಸ್ತಾವನೆಯೊಂದಿಗೆ ಲಗತ್ತಿಸಬೇಕಾದ ವಿವರ.

| ಕ್ರ.ಸಂ. | ವಿವರ | ವಿವರಗಳನ್ನು ಪೂರೈಸುವುದು. |
|---|---|---|
| 01 | ಶಿಕ್ಷಕರ ಹೆಸರು ಮತ್ತು ವಿಳಾಸ | |
| 02 | ಅ)ಹುಟ್ಟಿದ ದಿನಾಂಕ.<br>ಆ) ಸೇವೆಗೆ ಸೇರಿದ ದಿನಾಂಕ: | |
| 03 | ಖಾಯಂ ಪೂರ್ಣ ಅವಧಿ ಘೋಷಣೆ ಮಾಡಿದ ಆದೇಶದ ಸಂಖ್ಯೆ ಮತ್ತು ದಿನಾಂಕ. (ಪ್ರತಿಯೊಂದಿಗೆ) | |
| 04 | ವಿದ್ಯಾರ್ಹತೆ (ಅಂಕಪಟ್ಟಿ ದೃಢೀಕರಿಸಿ ಲಗತ್ತಿಸಿರಬೇಕು) | |
| 05 | ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ9, ಎಸ್‌ಆರ್‌ಎಸ್ 93 ದಿನಾಂಕ:18.11.93.ರ ಪ್ರಕಾರ ರೂ.50/– ಛಾಪಾ ಕಾಗದದಲ್ಲಿ ಮುಚ್ಚಳಿಕೆ ಲಗತ್ತಿಸಬೇಕು. | |
| 06 | ಮಕ್ಕಳ ಸಂಖ್ಯೆ | |
| 07 | ಶಿಕ್ಷಕರ ಸಂಖ್ಯೆ | |
| 08 | ಖಾಲಿ ಹುದ್ದೆ ಸಂಖ್ಯೆ | |
| 09 | ಈ ಹಿಂದೆ ಇಲಾಖೆಗೆ ಸೇರಿದ ನಂತರ ವ್ಯಾಸಂಗ ಮುಂದುವರೆಸಿದ್ದರೆ ಇಲಾಖಾ ಅನುಮತಿ ಪಡೆದಿರುವ ವಿವರ. | |
| 10 | ಸೀಟು ಹಂಚಿಕೆಯಾದ ಸಂಸ್ಥೆಯ ಹೆಸರು (ದಾಖಲೆಗಳೊಂದಿಗೆ) | |
| 11 | ಉನ್ನತ ವ್ಯಾಸಂಗಕ್ಕೆ ಅನುಮತಿ ನೀಡಿದಲ್ಲಿ ಬೋಧನಾ ಕಾರ್ಯಕ್ಕೆ ಮತ್ತು ಮಕ್ಕಳ ಕಲಿಕೆಗೆ ನಷ್ಟವಾಗದಿರುವ ಬಗ್ಗೆ ಕ್ಷೇತ್ರಶಿಕ್ಷಣಾಧಿಕಾರಿಗಳ ಅಭಿಪ್ರಾಯ. | |

ಕ್ಷೇತ್ರ ಶಿಕ್ಷಣಾಧಿಕಾರಿಗಳು